ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 24 ಎಂಟಿಬಿ 2014

ಕರ್ನಾಟಕ ಸರ್ಕಾರದ ಸಚಿವಾಲಯ.
ವಿಕಾಸಸೌಧ,
ಬೆಂಗಳೂರು, ದಿನಾಂಕ:09.11.2015.

ಇಂದ,

ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ.

ಇವರಿಗೆ,

**ವ್ಯವಸ್ಥಾಪಕ ನಿರ್ದೇಶಕರು,**
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಕಾಫಿ ಬೋರ್ಡ್ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ:– ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, ಹಲವರ್ತಿ ಮತ್ತು ಬಸಾಪುರ ಗ್ರಾಮಗಳಲ್ಲಿ ಕ್ರಮವಾಗಿ ಸ್ಥಾಪಿಸಲು ಉದ್ದೇಶಿಸಿರುವ M/s Aaress Iron & Steel Ltd., ಮತ್ತು M/s MSPL Ltd., ಯೋಜನೆಗಳಿಗೆ ನೀರನ್ನು ಒದಗಿಸುವ ಬಗ್ಗೆ.

ಉಲ್ಲೇಖ:– 1) ತಮ್ಮ ಪತ್ರ ಸಂಖ್ಯೆ:ಕೆಎನ್ಎನ್/ಟಿಬಿಪಿ/ಆರ್ ಎಸ್ & ಎಂಎಸ್‌ಪಿಎಲ್/2014–15/7268 ರವರ ಪತ್ರ ಸಂಖ್ಯೆ:11.03.2015.
2) ಮುಖ್ಯ ಇಂಜಿನಿಯರ್, ಕ.ನೀ.ನಿ.ನಿ., ನೀ.ಕೇ.ವ., ಮುನಿರಾಬಾದ್‌ರವರ ಪತ್ರ ಸಂಖ್ಯೆ:ಮುಇ/ಕ.ನೀ.ನಿ.ನಿ/ನೀಕೇವ/ತಾಶಾ–1/ಸಇ–1/2015–16/2396, ದಿನಾಂಕ:14.10.2015.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಹಿಂದೆ ಮೆ॥ಮುಕುಂದ ವಿಜಯನಗರ ಸ್ಟೀಲ್ ಕಂಪನಿಗೆ ತುಂಗಭದ್ರಾ ಜಲಾಶಯದಿಂದ ಮಾಡಲಾದ 12.55 ಎಂ.ಜಿ.ಡಿ. ನೀರಿನ ಹಂಚಿಕೆಯನ್ನು ರದ್ದುಪಡಿಸಿ, ಈ ನೀರಿನಲ್ಲಿ, M/s Aaress Iron & Steel Ltd ಕಂಪನಿಯ Integrated Iron and Steel plant ಯೋಜನೆಗೆ 10.00 ಎಂ.ಜಿ.ಡಿ. ಹಾಗೂ M/s MSPL Ltd ಕಂಪನಿಯ Pellet plant ಯೋಜನೆಗೆ 2.55 ಎಂ.ಜಿ.ಡಿ. ನೀರನ್ನು ಪ್ರತ್ಯೇಕಿಸಿ, ಎರಡೂ ಕೈಗಾರಿಕೆಗಳಿಗೆ ಅವಶ್ಯವಿರುವ ಒಟ್ಟು 12.55 ಎಂ.ಜಿ.ಡಿ. ಪ್ರಮಾಣದ ನೀರನ್ನು ತುಂಗಭದ್ರಾ ಜಲಾಶಯದಿಂದ ಎತ್ತಿ ಉಪಯೋಗಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟಂತೆ, ಅನುಮೋದನೆ ನೀಡಲಾಗಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

<u>ಷರತ್ತುಗಳು</u>

1. ಯಾವ ಉದ್ದೇಶಕ್ಕಾಗಿ ನೀರನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

2. ಕಂಪನಿಯು ತನ್ನ ಜಮೀನಿನಲ್ಲಿ ಸೂಕ್ತ ಸ್ಥಳಗಳಲ್ಲಿ ಕೊಳವೆ ಬಾವಿಗಳನ್ನು ನಿರ್ಮಿಸಿ ಅದರಿಂದ ಬರುವ ನೀರನ್ನು ಪೂರಕವಾಗಿ ಉಪಯೋಗಿಸಿಕೊಳ್ಳತಕ್ಕದ್ದು.

3. ಕಂಪನಿಯು ಮಳೆ ನೀರು ಸಂಗ್ರಹಣೆ ಮತ್ತು ಕೊಳವೆ ಬಾವಿಗಳಿಂದ ಲಭ್ಯವಾಗುವ ನೀರನ್ನು ಗಣನೆಗೆ ತೆಗೆದುಕೊಂಡು ಉಳಿಕೆ ಪ್ರಮಾಣದ ನೀರನ್ನು ಮಾತ್ರ ತುಂಗಭದ್ರಾ ಜಲಾಶಯದಿಂದ ಪಡೆಯತಕ್ಕದ್ದು.

4. ಯಾವುದೇ ಕಾರಣದಿಂದ ಯಾವುದೇ ಸಮಯದಲ್ಲಿ ಜಲಾಶಯ ನೀರು ಕಡಿಮೆಯಾದಲ್ಲಿ ಕಂಪನಿಗೆ ಉಂಟಾಗಬಹುದಾದ ನಷ್ಟಕ್ಕೆ ಸರ್ಕಾರದಿಂದ ಯಾವುದೇ ಪರಿಹಾರ ನೀಡಲಾಗುವುದಿಲ್ಲ.

5. ಕಂಪನಿಯು ಕೆಳಭಾಗದಲ್ಲಿ ಬರುವ ಜಮೀನಗಳ ನೀರಾವರಿಗೆ ಹಾಗೂ ಕುಡಿಯುವ ನೀರಿನ ಯೋಜನೆಗಳಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರವಹಿಸತಕ್ಕದ್ದು.

6. ಯಾವುದೇ ಕಾರಣದಿಂದ ಸರ್ಕಾರ ಅಥವಾ ಅದರ ನಿಯೋಜಿತ ಅಧಿಕಾರಿಗಳು ಕಂಪನಿಗೆ ನೀರನ್ನು ಉಪಯೋಗಿಸಲು ತಡೆಮಾಡಬಹುದು. ಇದಕ್ಕೆ ಸರ್ಕಾರ ಅಥವಾ ಅದರ ನಿಯೋಜಿತ ಅಧಿಕಾರಿಗಳು ಯಾವುದೇ ಕಾರಣಗಳನ್ನು ನೀಡಬೇಕಿಲ್ಲ. ಇದರಿಂದ ಕಂಪನಿಗೆ ನಷ್ಟವಾದಲ್ಲಿ ಸರ್ಕಾರ ಜವಾಬ್ದಾರರಲ್ಲ ಹಾಗೂ ಭರಿಸುವುದಿಲ್ಲ.

7. ಕಂಪನಿಗೆ ನೀರೆತ್ತುವ ಸ್ಥಳದ ಬಗ್ಗೆ ಯಾವುದೇ ವಿವಾದ ಉದ್ಭವಿಸಿದಲ್ಲಿ ಸರ್ಕಾರವು ಕಂಪನಿಗೆ ನೀಡಿರುವ ಅನುಮತಿಯನ್ನು ಹಿಂಪಡೆಯಬಹುದು.

8. ಕಂಪನಿಯು ಬಳಸಿದ ನೀರಿನ ಪ್ರಮಾಣವನ್ನು ಅಳತೆಮಾಡಲು ವಾಟರ್ ಮೀಟರ್ ಅನ್ನು ಅಳವಡಿಸುವುದು. ಇದರಲ್ಲಿ ಯಾವುದೇ ದುರಸ್ತಿ ಅಥವಾ ಬದಲಾವಣೆ ಮಾಡಬೇಕಾದಲ್ಲಿ ಕಂಪನಿಯವರು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ತಮ್ಮ ಸ್ವಂತ ಖರ್ಚಿನಿಂದಲೇ ಮಾಡತಕ್ಕದ್ದು.

9. ಅಳವಡಿಸಿರುವ ವಾಟರ್ ಮೀಟರ್ ಮತ್ತು ಗೇಜನ್ನು ತಪಾಸಣೆ ಮಾಡಲು ಇಲಾಖೆಯು ಗೊತ್ತುಪಡಿಸಿದ ಯಾವುದೇ ಅಧಿಕಾರಿಗೆ ಅವಕಾಶವಿರಬೇಕು.

10. ನೀರಿನ ಪ್ರಮಾಣವನ್ನು ಅಳತೆ ಮಾಡಲು ಅಳವಡಿಸಿರುವ ಯಾವುದೇ mechanical or electrical measurement devicesಗಳನ್ನು ಕಾಲಕಾಲಕ್ಕೆ ಸರ್ಕಾರ ಅಥವಾ ಸರ್ಕಾರದ ನಿಯೋಜಿತ ಅಧಿಕಾರಿಗಳು recalibrate or validate ಮಾಡಲು ತಿಳಿಸಬಹುದು. ಇಂಥ ಸಂದರ್ಭಗಳಲ್ಲಿ ಕಂಪನಿಯೇ ತನ್ನ ಸ್ವಂತ ಖರ್ಚಿನಿಂದ recognized or licensed institute ಗಳಿಂದ ಇಂಥ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕು.

11. ಕಂಪನಿಯು ಉಪಯೋಗಿಸುವ ನೀರಿನ ದರವನ್ನು ಕಂಪನಿಯು draw ಮಾಡುವ gross water quantity ಮೇಲೆ (drawal point ಹತ್ತಿರ) ವಿಧಿಸಲಾಗುವುದು. ಈ ನೀರನ್ನು ರವಾನಿಸುವಾಗ ಆಗಬಹುದಾದ ನೀರಿನ ನಷ್ಟದ (losses) ಬಗ್ಗೆ ಸರ್ಕಾರವಾಗಲಿ ಅಥವಾ ಯೋಜನಾಧಿಕಾರಿಗಳಾಗಲಿ ಜವಾಬ್ದಾರರಲ್ಲ.

ಮುಂದುವರೆದಿದೆ..3

12. ಕಾಮಗಾರಿಯನ್ನು ಕೈಗೊಳ್ಳುವಾಗ ಹಾಗೂ ನಂತರ ಜಲ ಸಂಪನ್ಮೂಲ ಇಲಾಖೆಯ ಹಾಗೂ ಖಾಸಗಿ ಆಸ್ತಿಪಾಸ್ತಿಗೆ ಹಾನಿಯಾಗದಂತೆ ಎಚ್ಚರವಹಿಸತಕ್ಕದ್ದು. ಒಂದು ಪಕ್ಷ ಯಾವುದೇ ಹಾನಿಯಾದಲ್ಲಿ ಕಂಪನಿಯವರೇ ನಷ್ಟದ ವೆಚ್ಚವನ್ನು ಭರಿಸತಕ್ಕದ್ದು.

13. ಕಂಪನಿಯು ಜಲಾಶಯದಿಂದ ನೀರು ಪಡೆಯಲು ಕೊಳವೆಗಳನ್ನು ಅಳವಡಿಸುವಾಗ ಮಾರ್ಗ ಮಧ್ಯದಲ್ಲಿ ವಿವಿಧ ಇಲಾಖೆಗಳಿಗೆ ಸೇರಿದ ಭೂಮಿ ಸಂಬಂಧ ಆಯಾ ಇಲಾಖೆಗಳ ಅನುಮತಿಯನ್ನು ಪಡೆಯತಕ್ಕದ್ದು.

14. ಕಂಪನಿಯ ಕೆಲಸಗಳಿಗೆ ಬೇಕಾಗುವ ಎಲ್ಲಾ ಭೂಮಿ ಅಥವಾ ಇತರೆ ಅನುಕೂಲಗಳನ್ನು ಸರ್ಕಾರದಿಂದಾಗಲಿ ಅಥವಾ ಖಾಸಗಿಯವರಿಂದಾಗಲಿ ನಿಗದಿಪಡಿಸಿದ ಮೊತ್ತವನ್ನು ಭರಿಸಿ ಕಂಪನಿಯು ಪಡೆಯಬೇಕು.

15. ಕಂಪನಿಯು ಅದರ ಕೆಲಸಕಾರ್ಯಗಳನ್ನು ಅದು ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿಯೇ ಮಾಡತಕ್ಕದ್ದು ಅದರ ಕೆಲಸಕಾರ್ಯಗಳಿಗೆ ಸರ್ಕಾರಿ ಅಥವಾ ಖಾಸಗಿ ಜಮೀನನ್ನು ಅನಧಿಕೃತವಾಗಿ ಉಪಯೋಗಿಸಬಾರದು.

16. ಸರ್ಕಾರವು ಕಾಲ ಕಾಲಕ್ಕೆ ನಿಗದಿಪಡಿಸಿದ ದರದಂತೆ ನೀರಿನ ದರವನ್ನು ಕಂಪನಿಯು ಜಲ ಸಂಪನ್ಮೂಲ ಇಲಾಖೆಗೆ ನಿಗದಿಪಡಿಸಿದ ಅವಧಿಯೊಳಗೆ ಮಾಹೆಯಾನ ಪಾವತಿಸುವುದು.

17. ಕಂಪನಿಯು, ವಾರ್ಷಿಕ ರೂ.12,000 ರಂತೆ ಗೌರವ ಧನವನ್ನು ಜಲ ಸಂಪನ್ಮೂಲ ಇಲಾಖೆಗೆ ಪಾವತಿಸತಕ್ಕದ್ದು.

18. ನೀರಿನ ಕೊರತೆ ಉಂಟಾದಲ್ಲಿ ನೀಡಿರುವ ಅನುಮತಿಯನ್ನು ಹಿಂಪಡೆಯುವ ಅಧಿಕಾರವು ಇಲಾಖೆಗೆ ಇರುತ್ತದೆ.

19. ಕಂಪನಿಯು ನೀರನ್ನು ಉಪಯೋಗಿಸಿ ಹಳ್ಳಕ್ಕೆ/ಜಲಾಶಯಕ್ಕೆ ವಾಪಸ್ಸು ಬಿಡುವ ಸಮಯದಲ್ಲಿ ಸರ್ಕಾರ ವಿಧಿಸುವ standards ಗೆ (CPHEEO/BIS/KPSCB standard ಗಳಿಗೆ) treat ಮಾಡಿ ಬಿಡತಕ್ಕದ್ದು. ಹಾಗೆ ಮಾಡದೆ ಇದ್ದ ಪಕ್ಷದಲ್ಲಿ ಕಂಪನಿಗೆ ನೀಡಿದ ಪರವಾನಿಗೆಯನ್ನು ಸರ್ಕಾರವು ಯಾವುದೇ ಮುನ್ಸೂಚನೆ ಇಲ್ಲದೆ ಹಿಂದಕ್ಕೆ ಪಡೆಯಬಹುದು.

20. ಕಾಮಗಾರಿಗಳನ್ನು ನಿರ್ವಹಿಸುವಾಗ ಹಾಗೂ ಯೋಜನೆ ಕಾರ್ಯರೂಪದಲ್ಲಿದ್ದಾಗ ಯಾವುದೇ ವಿವಾದಗಳು ಉದ್ಭವಿಸಿದರೆ ಆ ವಿವಾದಗಳನ್ನು ಕಂಪನಿಯೇ ಇತ್ಯರ್ಥ ಮಾಡಿಸಿಕೊಳ್ಳಬೇಕು. ಈ ಇತ್ಯರ್ಥದಲ್ಲಿ ಸರ್ಕಾರಕ್ಕೆ ವೆಚ್ಚವಾದರೆ ಅದನ್ನು ಕಂಪನಿಯು ಸರ್ಕಾರಕ್ಕೆ ಭರಿಸತಕ್ಕದ್ದು.

21. ಸಂಬಂಧಪಟ್ಟ ಇಲಾಖೆಗಳಾದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಹಾಗೂ ಇತರೆ ಇಲಾಖೆಗಳಿಂದ ಎಲ್ಲಾ ಅಗತ್ಯ ಪರವಾನಿಗೆಯನ್ನು ಪಡೆದು ನಂತರವೆ ಪ್ರಸ್ತಾಪಿತ ಘಟಕವನ್ನು ಕಾರ್ಯರೂಪಕ್ಕೆ ತರಲು ಕಂಪನಿಯು ಕ್ರಮ ವಹಿಸತಕ್ಕದ್ದು.

ಮುಂದುವರೆದಿದೆ..4

22. ಅರಣ್ಯ ಪರಿಸರ, ವನ್ಯ ಜೀವಿಗಳಿಗೆ ಅಥವಾ ಇನ್ಯಾವುದೇ ನಷ್ಟ ಅಥವಾ ಅಪಾಯ ಉಂಟಾದಲ್ಲಿ ಕಂಪನಿಯು ಕಾನೂನಿನ ಕ್ರಮಗಳಿಗೆ ಗುರಿಯಾಗುವುದಲ್ಲದೆ ಇದರಿಂದ ಆಗುವ ನಷ್ಟವನ್ನು ಸರ್ಕಾರ ಅಥವಾ ಅದರ ನಿಯೋಜಿತ ಅಧಿಕಾರಿಗಳು ನಿಗದಿಪಡಿಸುವ ಪ್ರಮಾಣ ಮತ್ತು ರೀತಿಯಲ್ಲಿ ಕಂಪನಿಯು ತುಂಬಬೇಕು.

23. ಜಲ ಸಂಪನ್ಮೂಲ ಇಲಾಖೆ ಹಾಗೂ ಇತರೆ ಇಲಾಖೆಗಳು ಕಾಲಕಾಲಕ್ಕೆ ನಿಗದಿ ಪಡಿಸಬಹುದಾದ ಸೇವಾ ಶುಲ್ಕಗಳು ಮತ್ತು ಇತರೆ ಕರಗಳನ್ನು ತಪ್ಪದೇ ಆಯಾ ಇಲಾಖೆಗೆ ಕಂಪನಿಯು ಪಾವತಿಸತಕ್ಕದ್ದು.

24. ಈ ಪರವಾನಗಿಯನ್ನು ಐದು ವರ್ಷಕ್ಕೊಮ್ಮೆ ಕಂಪನಿಯು ನವೀಕರಿಸಿಕೊಳ್ಳಬೇಕು.

25. ಮೇಲಿನ ನಿಬಂಧನೆಗಳ ಜೊತೆಗೆ ಸ್ಥಳಿಯವಾಗಿ ಅಗತ್ಯವೆನಿಸುವ ಇತರ ಯಾವುದೇ ನಿಬಂಧನೆಗಳನ್ನು ಜಲ ಸಂಪನ್ಮೂಲ ಇಲಾಖೆಯ ಸಂಬಂಧಪಟ್ಟ ಅಧಿಕಾರಿಯವರು ಸೂಚಿಸಿದಲ್ಲಿ ಅವುಗಳನ್ನು ಅಳವಡಿಸಿ ಸೂಕ್ತ ಕರಾರನ್ನು ಕಂಪನಿಯುವರು ಇಲಾಖಾ ಅಧಿಕಾರಿಗಳೊಂದಿಗೆ ಮಾಡಿಕೊಳ್ಳತಕ್ಕದ್ದು.

26. ಕಂಪನಿಯು ಮೇಲಿನ ಯಾವುದೇ ನಿಬಂಧನೆಯನ್ನು ಉಲ್ಲಂಘಿಸಿದಲ್ಲಿ ಯಾವುದೇ ಮುನ್ಸೂಚನೆಯನ್ನು ನೀಡದೆ ಅನುಮತಿಯನ್ನು ಹಿಂದಕ್ಕೆ ಪಡೆಯಲಾಗುವುದು.

ತಮ್ಮ ನಂಬುಗೆಯ,

29/4/15

(ಸಿ. ಶ್ರೀನಿವಾಸುಲು)

ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-I)

ಜಲ ಸಂಪನ್ಮೂಲ ಇಲಾಖೆ

ಪ್ರತಿಯನ್ನು:-

1) ಮುಖ್ಯ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನೀರಾವರಿ ಕೇಂದ್ರ ವಲಯ, ಮುನಿರಾಬಾದ್.
2) ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದ್‌ರಾವ್ ವೃತ್ತ, ಬೆಂಗಳೂರು.
3) The Managing Director, M/s AARESS IRON AND STEEL LIMITED, Baldota Enclave, Abheraj Baldota Road, Hospet-583203, Bellary District.
4) ನಿರ್ದೇಶಕರು(ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.